**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ. 349/2019**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಜಮ್ ಶಿದ್ | ಸಿ.ಡಬ್ಲ್ಯೂಃ 9 ಪಿ.ಡಬ್ಲ್ಯೂಃ8 |
| ತಂದೆಯ ಹೆಸರು | ಃ ಬಾಷ ಸಾಬ್ | |
| ವಯಸ್ಸು | ಃ 40 ವರ್ಷ | |
| ಉದ್ಯೋಗ | ಃ ವ್ಯಾಪಾರ | |
| ವಾಸಸ್ಥಳ | ಃ ಗೋಣೀಬೀಡು | |

ದಿನಾಂಕಃ 12.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿಯು ನನಗೆ ಪರಿಚಯ ಇರುತ್ತಾರೆ. ನಿಪಿ-9 ರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-9 (ಸಿ) ಎಂದು ಗುರುತಿಸಲಾಯಿತು. ನನ್ನ ಜೊತೆ ನಿಪಿ-9 ದಾಖಲೆಗೆ ಬೇರೆ ಯಾರು ಸಹಿ ಮಾಡಿರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೇನೆ. ನಿಪಿ-9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-9 ದಾಖಲೆಯನ್ನು ನಾನು ಓದಿ ನೋಡಿರುವುದಿಲ್ಲ. ಪೋಲೀಸರು ನನಗೆ ಓದಿ ಹೇಳಿರುವುದಿಲ್ಲ. ನಿಪಿ-10 ಛಾಯ ಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಯಾವ ಕಾರಣಕ್ಕಾಗಿ ಸದರಿ ಛಾಯಾ ಚಿತ್ರವನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಿಪಿ-19 ನೋಟೀಸಿನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-19 (ಬಿ) ಎಂದು ಗುರುತಿಸಲಾಯಿತು. ನಾನು ಚಾಸಾ-1 ರವರ ಜೊತೆ ಠಾಣೆಗೆ ಹೋಗಿ ಚಾಸಾ-1 ರವರ ಮದುವೆಯು ಆಮಂತ್ರಣ ಪತ್ರಿಕೆ ಮದುವೆಯ ಛಾಯಾ ಚಿತ್ರ ಮತ್ತು ಸಿ.ಡಿ ಯನ್ನು ಹಾಜರು ಮಾಡಿರುವುದಿಲ್ಲ.

**ಪ್ರತಿಕೂಲ ಸಾಕ್ಷಿ**

**<u>ಪಾಟೀ ಸವಾಲು ಸ.ಸ.ಅ. ರವರಿಂದ</u>**

ದಿನಾಂಕ 24-03-2019 ರಂದು ಮಹಜರ್ ಗೆ ಬರುವಂತೆ ನನಗೆ ಮತ್ತು ಚಾಸಾ-7 ರವರಿಗೆ ಪೋಲೀಸರು ನೋಟೀಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 24-03-2019 ರದು ನನ್ನ ಮತ್ತು ಚಾಸಾ-7 ರ ಸಮಕ್ಷಮ ನಿಪಿ-9 ರಂತೆ ಪೋಲೀಸರು ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಜೊತೆಗೆ ಠಾಣೆಗೆ ಹೋಗಿ ಚಾಸಾ-1 ಮತ್ತು ಆರೋಪಿಯ ಮದುವೆಯ ಆಮಂತ್ರಣ ಪತ್ರಿಕ ಛಾಯ ಚಿತ್ರಗಳು ಸಿ.ಡಿ ಯನ್ನು ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಊರಿನವರೇ ಆದೇ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.**

ಸಾಕ್ಷಿಯ ಸಹಿ